**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರು ಕನಕಪುರ ಇವರ ನ್ಯಾಯಾಲಯದಲ್ಲಿ</u>**

**ಸಿಸಿ ಸಂಖ್ಯೆ : 68/2022**

**ಫಿರ್ಯಾದುದಾರರು :** ರಾಜ್ಯದ ಪರ ಕೋಡಿಹಳ್ಳಿ ಪೊಲೀಸ್ ಠಾಣೆ

– ವಿರುದ್ದ –

**ಆರೋಪಿತರು :** ವೆಂಕಟೇಶ್ ಜಿ

ಬಿನ್ ಗೋಪಾಲ , 26 ವರ್ಷ

ಬುದ್ದಟ್ಟಿ ಕೋಟ್ಟೆ, ಶಾಲುದಾರು ಅಂಚೆ

ಡೆಂಕಣಿಕೋಟೆ, ಕೃಷ್ಣಗಿರಿ, ತಮಿಳುನಾಡು

**<u>ಆಪಾದನೆ</u>**

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ಆಪಾದನೆ ಏನೆಂದರೆ:-**

ದಿನಾಂಕ: 14.08.2021 ರಂದು ಮಧ್ಯಾಹ್ನ 12-45 ಗಂಟೆಯಲ್ಲಿ ಮಾನ್ಯ ನ್ಯಾಯಾಲಯದ ವ್ಯಾಪ್ತಿ, ಕೋಡಿಹಳ್ಳಿ, ಪೊಲೀಸ್ ಠಾಣೆ ಸರಹದ್ದು ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಟಿ.ಗೊಲ್ಲಹಳ್ಳಿ ಮತ್ತು ಶ್ರೀರಾಂಪುರ ಗ್ರಾಮದ ನಡುವೆ ಇರುವ ಭಾರತ್ ಗ್ಯಾಸ್ ಗೋಡಾನ್ ರಸ್ತೆಯ ಮುಂದಿನ ಕೋಡಿಹಳ್ಳಿ ಮುಳ್ಳಹಳ್ಳಿ ಮಾರ್ಗದ ರಸ್ತೆಯಲ್ಲಿ ಆರೋಪಿಯಾದ ನೀವು KA 51 P 4067 Scorpio ಕಾರಿನ ಚಾಲಕನಾಗಿದ್ದು, ಸದರಿ ಕಾರನ್ನು ತೆರಿಗೆದೊಡ್ಡಿ ಗ್ರಾಮದ ಕಡೆಯಿಂದ ಕೋಡಿಹಳ್ಳಿ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೋಡಿಹಳ್ಳಿ ಕಡೆಯಿಂದ ತೆರಿಗೆದೊಡ್ಡಿ ಗ್ರಾಮದ ಕಡೆಗೆ ಹೋಗುತ್ತಿದ್ದ ಚಾಸಾ-08 ಚಂದ್ರನಾಯ್ಕ ರವರ ತಂದೆ ಪೆಂಗ್ಯಾನಾಯ್ಕ ಚಾಲನೆ ಮಾಡುತ್ತಿದ್ದ TVS XL Super Heavy duty KA 42 R 3501 ಕ್ಕೆ ಡಿಕ್ಕಿ ಹೊಡೆಸಿದ ಪರಿಣಾಮ ಅಪಘಾತವಾಗಿದ್ದು, ಅಪಘಾತದಲ್ಲಿ ಪೆಂಗ್ಯಾನಾಯ್ಕ ರವರಿಗೆ ಎರಡು ಕಾಲು ಮತ್ತು ಹಿಂದಲೆಗೆ ರಕ್ತಗಾಯವಾಗಿದ್ದು, ಕನಕಪುರ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್

ಆಸ್ಪತ್ರೆಗೆ ಆಂಬಲೆನ್ಸ್ ನಲ್ಲಿ ಕರೆದುಕೊಂಡು ಹೋಗುವಾಗೆ ಅದೇ ದಿನ ಮಧ್ಯಾಹ್ನ, 15-30 ಗಂಟೆಯಲ್ಲಿ ಮೃತ ಪಟ್ಟಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ **279 ಮತ್ತು 304(ಎ)** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 09.12.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

**ಆರೋಪಿಯ ಹೇಳಿಕೆ**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 09.12.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆಪಾದನೆಯನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

ಆರೋಪಿಯ ಸಹಿ ಃ